ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 578

ಸದಸ್ಯರ ಹೆಸರು : ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 17.12.2021

ಉತ್ತರಿಸುವ ಸಚಿವರು : ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಡಾ:ನಂಜುಂಡಪ್ಪ ಸಮಿತಿ ವರದಿ ಪ್ರಕಾರ ರಾಜ್ಯದ ಹಿಂದಿನ 114 ತಾಲ್ಲೂಕುಗಳಲ್ಲಿ ಇರುವ ಅಸಮಾನತೆ ಹೋಗಲಾಡಿಸಲು, 35 ಅಂಶಗಳನ್ನು ಆಧರಿಸಿ, ಒಂದು ಸಮಗ್ರ ವರದಿಯನ್ನು ಸಲ್ಲಿಸಿದ್ದು, ಈ ವರದಿಯಲ್ಲಿನ ಮುಖ್ಯ ಶಿಫಾರಸ್ಸುಗಳು ಯಾವುವು ಮತ್ತು ಅವುಗಳ ಅನುಷ್ಠಾನ ಯಾವ ಹಂತದಲ್ಲಿದೆ;	ಡಾ: ಡಿ.ಎಂ.ನಂಜುಂಡಪ್ಪ ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತಾಧಿಕಾರ ಸಮಿತಿಯ 35 ಅಂಶಗಳನ್ನು ಆಧಾರಿಸಿ ಶಿಫಾರಸ್ಸುಗಳನ್ನು ನೀಡಿದ್ದು, ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. ಡಾ:ಡಿ.ಎಂ.ನಂಜುಂಡಪ್ಪರವರ ಶಿಫಾರಸ್ಸಿನ ಅನ್ವಯ ಸಚಿವ ಸಂಪುಟದ ಟಿಪ್ಪಣಿ ಸಂಖ್ಯೆ: ಯೋಇ 72 ಯೋವಿವಿ 2005/2006ರಲ್ಲಿ 19 ಮುಖ್ಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು 2007-08 ರಿಂದ 2021-22ರವರೆಗೆ 31 ಇಲಾಖೆಯ 172 ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.
ಆ)	ಡಾ: ನಂಜುಂಡಪ್ಪರವರ ವರದಿ ಆಧರಿಸಿ, ವಿವಿಧ ಇಲಾಖೆಗಳ ಅಭಿವೃದ್ಧಿಗಾಗಿ ಅನುದಾನವನ್ನು ಕೆಲವೊಂದು ಆಧಾರಿತ ಅಂಶಗಳಿಗೆ ನೀಡುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಕಳೆದ 3 ವರ್ಷಗಳಲ್ಲಿ ಇಲಾಖಾವಾರು ಮತ್ತು ವರ್ಷವಾರು ನೀಡಿರುವ ಅನುದಾನವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	'ಹೌದು' ಕಳೆದ 3 ವರ್ಷಗಳಲ್ಲಿ ಇಲಾಖಾವಾರು ಮತ್ತು ವರ್ಷವಾರು ಅನದಾನದ ಮಾಹಿತಿಯನ್ನು ಅನುಬಂಧ-2ರಲ್ಲಿ ನೀಡಲಾಗಿದೆ.
ಇ)	ಡಾ: ನಂಜುಂಡಪ್ಪ ಸಮಿತಿ ಶಿಫಾರಸ್ಸಿನ ಅನ್ವಯ ಪ್ರತಿ ವರ್ಷ ಲೋಕೋಪಯೋಗಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮುಂತಾದ ಇಲಾಖೆಗಳಿಗೆ ರಸ್ತೆ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡುತ್ತಿರುವುದು, 2020-21 ಮತ್ತು 2021-22ನೇ ಸಾಲುಗಳಲ್ಲಿ ಈ ಇಲಾಖೆಗಳಿಗೆ ಇನ್ನು ಅನುದಾನ ಬಿಡುಗಡೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಬಿಡುಗಡೆ ಮಾಡದಿರಲು ಕಾರಣವೇನು ಮತ್ತು ರಾಜ್ಯ ಸರ್ಕಾರ ತನ್ನ ವಿವೇಚನ ಅಡಿಯಲ್ಲಿ ಅನುದಾನ ಬಿಡುಗಡೆ ಮಾಡಲು ಸಾಧ್ಯವಿಲ್ಲವೆಂಬುದನ್ನು ಅರಿತಿದೆಯೇ; ಹಾಗಿದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು;	ಯೋಜನಾ ಇಲಾಖೆಯ ವಿಶೇಷ ಅಭಿವೃದ್ಧಿ ಯೋಜನೆಯಡಿ ಯಾವುದೇ ಅನುದಾನ ಬಿಡುಗಡೆ ಮಾಡುವ ವ್ಯವಸ್ಥೆ ಇರುವುದಿಲ್ಲ. ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳು ಸೇರಿದಂತೆ ಅನುಷ್ಠಾನ ಇಲಾಖೆಗಳೇ ಅನುದಾನ ಬಿಡುಗಡೆ ಮಾಡುತ್ತವೆ. ವಿಶೇಷ ಅಭಿವೃದ್ಧಿ ಯೋಜನೆಯಲ್ಲಿ ವಿವೇಚನ ಅಡಿಯಲ್ಲಿ ಅನುದಾನ ಬಿಡುಗಡೆ ಮಾಡುವ ಪದ್ಧತಿ ಜಾರಿಯಲ್ಲಿಯಿರುವುದಿಲ್ಲ.
ಈ)	ಕಳೆದ ದಶಕಗಳಲ್ಲಿ ರಾಜ್ಯದಲ್ಲಿ ರಚಿತವಾಗಿರುವ 11 ಜಿಲ್ಲೆಗಳಲ್ಲಿ ಡಾ:ನಂಜುಂಡಪ್ಪ ಸಮಿತಿ ಮಾಡಿರುವ ಶಿಫಾರಸ್ಸುಗಳು ಅನುಷ್ಠಾನವಾಗದೇ, ಪ್ರಾದೇಶಿಕ ಅಸಮಾನತೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸಂಪೂರ್ಣ	ನಂಜುಂಡಪ್ಪ ವರದಿಯು ಜಿಲ್ಲೆಗಳಿಗೇ ಸಂಬಂದಿಸಿರದೇ, ತಾಲ್ಲೂಕುಗಳ ದುಸ್ಥಿತಿ ಸೂಚ್ಯಾಂಕಗಳ ಅನುಗುಣವಾಗಿ ಅನುದಾನ ಹಂಚಿಕೆ ಮಾಡಲಾಗುತ್ತದೆ. ಹೊಸದಾಗಿ ರಚನೆಯಾಗಿರುವ ತಾಲ್ಲೂಕುಗಳು ಸಹ

ಕ್ರ ಸಂ.	ಪ್ರಶ್ನೆ	ಉತ್ತರ
	ಮಾಹಿತಿ ನೀಡುವುದು;	ಸೇರ್ಪಡೆಗೊಂಡಿರುತ್ತವೆ. ಆದ್ದರಿಂದ ಪ್ರಾದೇಶಿಕ ಅಸಮಾನತೆ ಹೆಚ್ಚಾಗಿರುವ ಬಗ್ಗೆ ಯಾವುದೇ ವರದಿ ಸ್ವೀಕೃತವಾಗಿರುವುದಿಲ್ಲ.
ಉ)	ಡಾ: ನಂಜುಂಡಪ್ಪ ಸಮಿತಿಯ ವರದಿಯನ್ನು ಯಥವತ್ ಆಗಿ ಅನುಷ್ಠಾನಗೊಳಿಸುವ ಬದಲು ರಾಜ್ಯ ಸರ್ಕಾರ ಈ ವರದಿಯನ್ನು ಕೈಬಿಡಲು ನಿರ್ಧರಿಸಿರುವುದು ನಿಜವೇ; ಹಾಗಿದ್ದಲ್ಲಿ ಇದರ ಹಿಂದಿರುವ ಬಲವಾದ ಕಾರಣಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	-ಯಾವುದೇ ಇಲ್ಲ-

ಪಿಡಿಎಸ್ 73 ಎಸ್‌ಡಿಪಿ 2021

(ಮುನಿರತ್ನ)
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಅನುಬಂಧ-1

ಪ್ರಾದೇಶಿಕ ಅಸಮಾತೋಲನ ನಿವಾರಣಾ ಉನ್ನತಾಧಿಕಾರ ಸಮಿತಿಯ ಶಿಫಾರಸ್ಸುಗಳು:-

1. 114 ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ರೂ.16000 ಕೋಟಿಗಳ ಎಂಟು ವರ್ಷಗಳ ವಿಶೇಷ ಯೋಜನೆಯನ್ನು ತಯಾರಿಸುವುದು.
2. ನಿಮ್ಹಾನ್ಸ್ ಮಾದರಿಯಲ್ಲಿ ಧಾರವಾಡದ ಹುಚ್ಚಾಸ್ಪತ್ರೆಯನ್ನು ಸಜ್ಜುಗೊಳಿಸುವುದು.
3. ಕೊಡಗು ಜಿಲ್ಲೆಯಲ್ಲಿ ಸೈನಿಕ ಶಾಲೆಯ ಸ್ಥಾಪನೆ.
4. ಗುಲ್ಬರ್ಗಾದಲ್ಲಿ ಕೇಂದ್ರಿಯ ವಿಶ್ವವಿದ್ಯಾಲಯದ ಸ್ಥಾಪನೆ, ರಾಯಚೂರಿನಲ್ಲಿ ಐ.ಐ.ಟಿ ಹಾಗೂ ಬೆಳಗಾಂ ಅಥವಾ ಧಾರವಾಡದಲ್ಲಿ ಐ.ಐ.ಎಂ ಸ್ಥಾಪನೆ, ಬೆಂಗಳೂರು ವಿಶ್ವವಿದ್ಯಾಲಯವನ್ನು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಮಟ್ಟದಲ್ಲಿ ಅಭಿವೃದ್ಧಿ ಪಡಿಸುವುದು.
5. ಪ್ರತೀ ಜಿಲ್ಲೆಯಲ್ಲಿ ಒಂದು ರೈತರ ತರಬೇತಿ ಕೇಂದ್ರ ಹಾಗೂ 6 ಪ್ರಾದೇಶಿಕ ಅಭಿವೃದ್ಧಿ ತರಬೇತಿ ಕೇಂದ್ರಗಳ ಸ್ಥಾಪನೆ.
6. ಬೆಂಬಲ ಬೆಲೆ ನೀತಿಯ ಪರಿಣಾಮಕಾರಿಯಾದ ಅನುಷ್ಠಾನಕ್ಕಾಗಿ ರೂ.1 ಸಾವಿರ ಕೋಟಿಗಳ ಕೃಷಿ ಉತ್ಪನ್ನ ಬೆಲೆಗಳ ನಿಯಂತ್ರನ ನಿಧಿ ಸ್ಥಾಪನೆ.
7. ಗುಲ್ಬರ್ಗಾ ಕೇಂದ್ರ ಸ್ಥಾನವಿರುವಂತೆ ಉತ್ತರ ಕರ್ನಾಟಕದಲ್ಲಿ ಕೃಷಿಸಾಲ ಅಭಿವೃದ್ಧಿ ಕಂಪನಿಯ ಸ್ಥಾಪನೆ.
8. ಬೀದರ್‌ನಲ್ಲಿ ಪಶುಸಂಗೋಪನಾ ವಿಶ್ವವಿದ್ಯಾಲಯದ ಸ್ಥಾಪನೆ.
9. ಬೀದರ್‌ನಲ್ಲಿ ಸಾರ್ವಜನಿಕ ವಲಯದಲ್ಲಿ ಗೃಹ ತ್ಯಾಜ್ಯ ಪರಿಷ್ಕರಣ ಸ್ಥಾವರ (Effluent treatment plant) ಸ್ಥಾಪನೆ.
10. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಿಂದ ತಾಲ್ಲೂಕುವಾರು ಎಸ್.ಎನ್.ಡಿ.ಪಿ.ತಯಾರಿ.
11. ಉತ್ತರ ಕರ್ನಾಟಕದಲ್ಲಿ ಪ್ರತ್ಯೇಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ರಚನೆ.
12. ಹುಬ್ಬಳಿ, ಗುಲ್ಬಗಾ ಮತ್ತು ಬಾಗಲಕೋಟೆಗಳಲ್ಲಿ ಐ.ಟಿ.ಪಾರ್ಕ್ ಸ್ಥಾಪನೆ.
13. ಎಲ್ಲ ಪ್ರದೇಶಾಭಿವೃದ್ಧಿ ಮಂಡಳಿಗಳನ್ನು ರದ್ದುಪಡಿಸುವುದು.
14. ಜಿಲ್ಲಾ ಮತ್ತು ಪ್ರಾದೇಶಿಕ ವಿಭಾಗದ ಪುನರಚನೆ.
15. ಎಸ್.ಎನ್.ಡಿ.ಟಿ ಮುಂಬೈ ಇದರ ಮಾದರಿಯಲ್ಲಿ ಹಾಸನ, ದಾವಣಗೆರೆ ಮತ್ತು ವಿಜಾಪುರಗಳಲ್ಲಿ ಮಹಿಳಾ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದು.
16. ಉತ್ತರ ಕರ್ನಾಟಕದ ಕಾರ್ಯ ವ್ಯಾಪ್ತಿಗೆ ಒಳಪಡುವಂತೆ ಪ್ರತ್ಯೇಕ ಕರ್ನಾಟಕ ರಾಜ್ಯ ಹಣಕಾಸು ನಿಗಮವನ್ನು ಸ್ಥಾಪಿಸುವುದು.

17. ಸರಕು ಮಂಡಳಿಗಳನ್ನು ಸ್ಥಾಪಿಸುವುದು.

18. ಗುಲ್ಬರ್ಗ ಮತ್ತು ಹುಬ್ಬಳ್ಳಿಯಲ್ಲಿ ಹೈಕೋರ್ಟ ಬೆಂಚ್ ಸ್ಥಾಪನೆ.

19. ರಾಜ್ಯದ ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆ.

ಅನುಬಂಧ-2

2018-19, 2019-20 ಹಾಗೂ 2020-21ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ನಿಗದಿ ಪಡಿಸಿದ ಅನುದಾನದ ವಿವರ:-

(ರೂ.ಕೋಟಿಗಳು)

ಕ್ರ ಸಂ.	ಇಲಾಖೆ	2018-19ನೇ ಸಾಲಿನಲ್ಲಿ ನಿಗದಿ ಅನುದಾನ	2019-20ನೇ ಸಾಲಿನಲ್ಲಿ ನಿಗದಿ ಅನುದಾನ	2020-21ನೇ ಸಾಲಿನಲ್ಲಿ ನಿಗದಿ ಅನುದಾನ	ಒಟ್ಟು
1	ಕೃಷಿ	121.46	108.20		**229.66**
2	ಒಳಾಡಳಿತ		4.30	4.89	**9.19**
3	ತೋಟಗಾರಿಕೆ	52.81	49.79	34.43	**137.03**
6	ಲೋಕಯೋಪಯೋಗಿ	302.67	370.70	217.85	**891.22**
7	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್	1058.91	1143.60	497.09	**2699.60**
8	ವಸತಿ	194.53	180.07	150.00	**524.60**
9	ಜಲಸಂಪನ್ಮೂಲ	594.25	603.03	793.88	**1991.16**
10	ಸಣ್ಣ ನೀರಾವರಿ		111.18	35.00	**146.18**
11	ಇಂಧನ	140.13	191.37	146.78	**478.28**
13	ಸಾರಿಗೆ	159.12	152.86	75.75	**387.73**
14	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	261.53	294.55	170.05	**726.13**
15	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ	34.59	88.46	28.30	**151.35**
16	ಉನ್ನತ ಶಿಕ್ಷಣ	70.00	53.89	35.97	**159.86**
19	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	36.00	36.00	107.75	**179.75**
22	ಮೂಲಭೂತ ಸೌಕರ್ಯ	87.37	35.51	35.51	**158.39**
24	ಹಿಂದುಳಿದ ವರ್ಗಗಳ ಕಲ್ಯಾಣ	80.32	82.96	0.01	**163.29**
25	ಸಹಕಾರ	7.60	5.56		**13.16**
26	ಕೌಶಲ್ಯಾಭಿವೃದ್ಧಿ ಇಲಾಖೆ	63.87	37.22	43.14	**144.23**
27	ಅಲ್ಪಸಂಖ್ಯಾತರ ಇಲಾಖೆ	50.00	50.00	50.00	**150.00**
28	ಯೋಜನೆ (KKRDB)	217.81			**217.81**
	ಒಟ್ಟು	**3532.97**	**3599.25**	**2426.40**	**9558.62**